# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಶುಲ್ಕ ಮಂಜೂರಾತಿ/ ಮರುಪಾವತಿ ಯೋಜನೆಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂ:ಎಸ್‌ಡಬ್ಲ್ಯೂಎಲ್/229/ಬಿಸಿವಿ/80 ದಿ:16.12.1982.

2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರ ಪ್ರಸ್ತಾವನೆ ಸಂ.ಸಕನಿ/ಇಡಿ 3/ಸಿಆರ್ 02/2015-16 ದಿನಾಂಕ 15.04.2015

*****

ಪ್ರಸ್ತಾವನೆ:

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಶುಲ್ಕ ಮಂಜೂರಾತಿ/ ಮರುಪಾವತಿ ಯೋಜನೆಯ ನಿಯಮಗಳನ್ನು 1982 ರಲ್ಲಿ ಜಾರಿಗೆ ತಂದಿದ್ದು, ತದನಂತರ ಸಾಕಷ್ಟು ಬದಲಾವಣೆಗಳು ಆಗಿರುತ್ತವೆ. ಆದರೆ 1982ರ ಸರ್ಕಾರದ ಆದೇಶ ಹಾಗೇ ಮುಂದುವರಿಯುತ್ತಿದ್ದರೂ ಸಹ, ಬೇರೆ ಬೇರೆ ರೀತಿಯಲ್ಲಿ ಶುಲ್ಕ ಮಂಜೂರಾತಿ / ಮರುಪಾವತಿ ಮಾಡಲಾಗುತ್ತದೆ ಮತ್ತು ಇದರಿಂದ ಕೆಲವು ಸಮಸ್ಯೆಗಳು ಎದುರಾಗುತ್ತಿವೆ. ಸಮಾಜ ಕಲ್ಯಾಣ ಇಲಾಖೆಯಿಂದ ಭಾರತ ಸರ್ಕಾರ ನಿಯಮಗಳಂತೆ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಶುಲ್ಕ ಮಂಜೂರಾತಿ / ಮರುಪಾವತಿ ನೀಡಲು ವಾರ್ಷಿಕ ವರಮಾನ ರೂ.2.50 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಆದರೆ ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯಿಂದ ವಾರ್ಷಿಕ ಆದಾಯ ರೂ.2.50 ಲಕ್ಷಗಳ ಮೇಲ್ಪಟ್ಟವರಿಗೆ ಸಹ ಕೆಲವು ಕೋರ್ಸುಗಳಿಗೆ ಶುಲ್ಕ ಮರುಪಾವತಿ ಮಾಡಲಾಗುತ್ತಿದೆ. ಆದರೆ ಸಿ.ಇ.ಟಿ ಮುಖಾಂತರ ಪ್ರವೇಶ ಪಡೆದವರಿಗೆ ಮಾತ್ರ ಶುಲ್ಕ ಮರುಪಾವತಿ ಮಾಡಲಾಗುತ್ತಿದ್ದು, ಇತರ ವಿಧಾನ ಅಂದರೆ ಕಾಮೆಡ್-ಕೆ ಇತ್ಯಾದಿ ಮೂಲಕ ಪ್ರವೇಶ ಪಡೆದವರಿಗೆ ಈ ಸವಲತ್ತು ನೀಡಲಾಗುತ್ತಿಲ್ಲ.

ಈ ಹಿನ್ನೆಲೆಯಲ್ಲಿ 2015-16ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ (205)ರಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿದೆ.

"ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ತಾಂತ್ರಿಕ/ವೈದ್ಯಕೀಯ/ದಂತ ವೈದ್ಯಕೀಯ, ಇತ್ಯಾದಿ ಕೋರ್ಸುಗಳಿಗೆ CET, COMED-K, Deemed Universities ಮೂಲಕ ಆಯ್ಕೆಯಾಗಿ ದಾಖಲಾಗುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ 2.50 ಲಕ್ಷ ರೂ.ವರೆಗೆ ಇರುವವರಿಗೆ ಶೇ:100 ರಷ್ಟು ಹಾಗೂ 2.50 ಲಕ್ಷ ರೂ.ಗಳಿಂದ 10.00 ಲಕ್ಷ ರೂ.ಗಳವರೆಗೆ ಇರುವವರಿಗೆ ಶೇ:50 ರಷ್ಟು ಶುಲ್ಕವನ್ನು ಮರುಪಾವತಿಸಲಾಗುವುದು".

ಈ ಮೇಲ್ಕಂಡ ಘೋಷಣೆಯನ್ನು ಅನುಷ್ಠಾನಗೊಳಿಸಲು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಸರ್ಕಾರ ಈ ಕೆಳಕಂಡ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಕಇ 178 ಪಕವಿ 2015, ಬೆಂಗಳೂರು, ದಿನಾಂಕ : 31.12.2015**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಈ ಕೆಳಕಂಡ ಅರ್ಹತೆ ಮತ್ತು ಷರತ್ತುಗಳಿಗೆ ಒಳಪಟ್ಟು ಶುಲ್ಕ ಮಂಜೂರಾತಿ / ಮರು ಪಾವತಿ ಮಾಡಲು ಆದೇಶಿಸಿದೆ.

**I. ಶುಲ್ಕ ಮಂಜೂರಾತಿ/ಮರು ಪಾವತಿ ಪಡೆಯಲು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಇರಬೇಕಾದ ಅರ್ಹತೆ.**

1. ಭಾರತದ ಪ್ರಜೆಯಾಗಿದ್ದು, ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಕನಿಷ್ಠ 7 ವರ್ಷ ಕರ್ನಾಟಕದಲ್ಲಿ ವ್ಯಾಸಂಗ ಮಾಡಿರತಕ್ಕದ್ದು, ಮತ್ತು ಕರ್ನಾಟಕ ರಾಜ್ಯದ ಖಾಯಂ ವಾಸಿಯಾಗಿರಬೇಕು. ಕರ್ನಾಟಕ ರಾಜ್ಯದ ತಹಶೀಲ್ದಾರ್‌ರವರಿಂದ ನೀಡಲ್ಪಡುವ ನಮೂನೆ-ಡಿ ಯಲ್ಲಿ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
2. ಕರ್ನಾಟಕ ಶಾಸನಬದ್ಧ ವಿಶ್ವವಿದ್ಯಾಲಯಗಳ/ಪಿಯು ಬೋರ್ಡ ಅಧೀನಕ್ಕೆ ಒಳಪಡುವ ಸರ್ಕಾರಿ/ಸ್ಥಳೀಯ ಸಂಸ್ಥೆ/ಖಾಸಗಿ ಅನುದಾನಿತ/ಮಾನ್ಯತೆ ಪಡೆದ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಅರ್ಹರಿರುತ್ತಾರೆ.
3. ವಿದ್ಯಾರ್ಥಿಗಳು ಹಿಂದಿನ ವರ್ಷದ ಪಬ್ಲಿಕ್ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗದಿದ್ದಲ್ಲಿ ಮುಂದಿನ ವರ್ಷದಲ್ಲಿ ಶುಲ್ಕ ಮಂಜೂರಾತಿ / ಮರುಪಾವತಿಗೆ ಅರ್ಹರಿರುವುದಿಲ್ಲ. ಆದರೆ ಈ ಕೋರ್ಸುಗಳಲ್ಲಿ ಕ್ಯಾರಿ ಓವರ್ ಪದ್ಧತಿ ಜಾರಿಯಲ್ಲಿದ್ದು, ಮುಂದಿನ ತರಗತಿಗೆ / ವರ್ಷಕ್ಕೆ ಪ್ರವೇಶಕ್ಕೆ ಅವಕಾಶವಿದ್ದಲ್ಲಿ ಅಂತಹವರು ಶುಲ್ಕ ಮಂಜೂರಾತಿ / ಮರುಪಾವತಿಗೆ ಅರ್ಹರಿರುತ್ತಾರೆ.

--2)

ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

4. ಯಾವ ಸರ್ಕಾರಿ / ಖಾಸಗಿ ಸಂಸ್ಥೆಗಳಲ್ಲಿ ಉಚಿತ ಶಿಕ್ಷಣ ನೀಡಲಾಗುತ್ತಿದೆಯೋ (ಯಾವ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಂದ ಶುಲ್ಕಗಳನ್ನು ವಸೂಲು ಮಾಡುವುದಿಲ್ಲವೊ) ಅಂತಹ ಸಂಸ್ಥೆಗಳು ಮತ್ತು ಅಲ್ಲಿನ ವಿದ್ಯಾರ್ಥಿಗಳು ಶುಲ್ಕ ಮಂಜೂರಾತಿ / ಮರುಪಾವತಿಗೆ ಅರ್ಹರಿರುವುದಿಲ್ಲ.
5. ಪರೀಕ್ಷಾ ಶುಲ್ಕವನ್ನು ವರ್ಷಕ್ಕೊಮ್ಮೆ ಮರು ಪಾವತಿಸಲಾಗುವುದು. ಅನುತ್ತೀರ್ಣರಾದ ಅಭ್ಯರ್ಥಿಗಳು ಹಾಗೂ ಸಪ್ಲಿಮೆಂಟರಿ ಪರೀಕ್ಷೆ ತೆಗೆದುಕೊಳ್ಳುವವರು ಪರೀಕ್ಷಾ ಶುಲ್ಕ ಮಂಜೂರಾತಿ / ಮರು ಪಾವತಿಗೆ ಅರ್ಹರಲ್ಲ.
6. ಬೇರೆ ಯಾವುದೇ ಸರ್ಕಾರ ಮತ್ತು ಸರ್ಕಾರೇತರ ಮೂಲಗಳಿಂದ ಈಗಾಗಲೇ ಶುಲ್ಕ ಮರುಪಾವತಿ ಪಡೆದಿದ್ದಲ್ಲಿ ಅಂತಹವರು ಪುನ: ಈ ಯೋಜನೆಯಡಿ ಶುಲ್ಕ ಮಂಜೂರಾತಿ / ಮರುಪಾವತಿಗೆ ಅರ್ಹರಿರುವುದಿಲ್ಲ.
7. ಡೊನೇಷನ್ ಸೀಟುಗಳ ಕೋಟಾದಡಿಯಲ್ಲಿ ಪ್ರವೇಶ ಪಡೆದವರು ಶುಲ್ಕ ಮಂಜೂರಾತಿ / ಮರುಪಾವತಿಗೆ ಅರ್ಹರಿರುವುದಿಲ್ಲ.
8. ಕರ್ನಾಟಕ ರಾಜ್ಯದಲ್ಲಿ ಖಾಯಂ ವಾಸಿಯಾಗಿದ್ದ ವಿದ್ಯಾರ್ಥಿಗಳು ಹೊರ ರಾಜ್ಯದಲ್ಲಿ ಶಾಸನಬದ್ಧವಾಗಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳ ಅಧೀನಕ್ಕೆ ಒಳಪಡುವ ಸರ್ಕಾರಿ / ಸ್ಥಳೀಯ ಸಂಸ್ಥೆ / ಖಾಸಗಿ ಅನುದಾನಿತ /ಮಾನ್ಯತೆ ಪಡೆದ ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಅರ್ಹರಿರುತ್ತಾರೆ. ಆದರೆ ಅಂತಹವರಿಗೆ ಕರ್ನಾಟಕ ರಾಜ್ಯದಲ್ಲಿ ಆಯಾ ಕೋರ್ಸುಗಳಲ್ಲಿ ನಿಗದಿಪಡಿಸಿದ ಶುಲ್ಕ ಅಥವಾ ವಾಸ್ತವವಾಗಿ ಪಾವತಿಸಿದ ಶುಲ್ಕ ಅದರಲ್ಲಿ ಯಾವುದು ಕಡಿಮೆಯೋ ಅದನ್ನು ಮಾತ್ರ ಮಂಜೂರಾತಿ / ಮರುಪಾವತಿಸಲಾಗುವುದು. (ಈ ಶುಲ್ಕ ಮರುಪಾವತಿ ಪಡೆಯಲು ವಾರ್ಷಿಕ ಆದಾಯ ರೂ.2.50 ಲಕ್ಷಗಳ ಒಳಗೆ ಇರುವವರು ಮಾತ್ರ ಅರ್ಹರು)
9. ಕುಟುಂಬ ವಾರ್ಷಿಕ ವರಮಾನ/ಆದಾಯ:

ಎ) ಕುಟುಂಬದ ವಾರ್ಷಿಕ ವರಮಾನ ಎಲ್ಲಾ ಮೂಲಗಳಿಂದ ರೂ.2.50 ಲಕ್ಷಗಳ ಮಿತಿಯೊಳಗಿರತಕ್ಕದ್ದು. ಅಂತಹ ವಿದ್ಯಾರ್ಥಿಗಳು ಪೂರ್ಣ (ಶೇ:100 ರಷ್ಟು) ಶುಲ್ಕ ಮಂಜೂರಾತಿಗೆ ಅರ್ಹರಿರುತ್ತಾರೆ.

ಬಿ) ಆದರೆ ಕುಟುಂಬದ ವಾರ್ಷಿಕ ವರಮಾನ ಎಲ್ಲಾ ಮೂಲಗಳಿಂದ ರೂ.2.50 ಲಕ್ಷಗಳಿಂದ. ರೂ.10.00 ಲಕ್ಷಗಳ ಮಿತಿಯೊಳಗಿದ್ದಲ್ಲಿ, ಇಂತಹ ವಿದ್ಯಾರ್ಥಿಗಳು ನಿಗದಿಪಡಿಸಿದ ಒಟ್ಟು ಶುಲ್ಕದಲ್ಲಿ ಶೇ:50 ರಷ್ಟು ಮರುಪಾವತಿಗೆ ಅರ್ಹರಿರುತ್ತಾರೆ.

II. ಮಂಜೂರಾತಿ/ಮರು ಪಾವತಿಸಬೇಕಾದ ಶುಲ್ಕಗಳು

| ಕುಟುಂಬ ವಾರ್ಷಿಕ ವರಮಾನ ರೂ.2.50 ಲಕ್ಷದೊಳಗಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು | ಕುಟುಂಬ ವಾರ್ಷಿಕ ವರಮಾನ ರೂ.2.50 ಗಳಿಂದ ರೂ.10.00 ಲಕ್ಷಗಳ ಮಿತಿಯೊಳಗಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು |
|---|---|
| 1.ಪರೀಕ್ಷಾ ಶುಲ್ಕ | 1.ಪರೀಕ್ಷಾ ಶುಲ್ಕ |
| 2. ಪ್ರವೇಶ/ನೋಂದಣಿ ಶುಲ್ಕ | 2. ಪ್ರವೇಶ/ನೋಂದಣಿ ಶುಲ್ಕ |
| 3.ಬೋಧನಾ ಶುಲ್ಕ | 3. ಬೋಧನಾ ಶುಲ್ಕ |
| 4.ಪ್ರಯೋಗಾಲಯ ಶುಲ್ಕ (ವಿಜ್ಞಾನ/ ವೈದ್ಯಕೀಯ/ ತಾಂತ್ರಿಕ ಕೋರ್ಸುಗಳಿಗೆ) | 4. ಇತರೆ ಕಡ್ಡಾಯ ಶುಲ್ಕಗಳು ಗರಿಷ್ಠ ರೂ.500/- ಅಥವಾ ವಾಸ್ತವ ಶುಲ್ಕ ಯಾವುದು ಕಡಿಮೆಯೋ ಅದು. |
| 5. ಕ್ರೀಡಾ ಶುಲ್ಕ | - |
| 6. ಗ್ರಂಥಾಲಯ ಶುಲ್ಕ | - |
| 7. ವೈದ್ಯಕೀಯ ಪರೀಕ್ಷಾ ಶುಲ್ಕ | - |
| 8. ಇತರೆ ಕಡ್ಡಾಯ ಶುಲ್ಕಗಳು ಗರಿಷ್ಠ ರೂ.500/- ಅಥವಾ ವಾಸ್ತವ ಶುಲ್ಕ ಯಾವುದು ಕಡಿಮೆಯೊ ಅದು: | - |

---3)

ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

III. ಕುಟುಂಬ ವಾರ್ಷಿಕ ವರಮಾನ ರೂ.2.50 ಲಕ್ಷದೊಳಗಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಗೆ ಮಂಜೂರಾತಿ/ ಮರುಪಾವತಿ ಪ್ರಾಧಿಕಾರಿ ಮತ್ತು ಇತರೆ ವಿವರಗಳು

1. ಶುಲ್ಕ ಮಂಜೂರಾತಿ/ಮರುಪಾವತಿ ಪ್ರಾಧಿಕಾರ :- ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಸಹಾಯಕ ನಿರ್ದೇಶಕರು ಗ್ರೇಡ್-1/ಗ್ರೇಡ್-2 (TSWO)/ಪರಿಶಿಷ್ಟ ವರ್ಗದ ತಾಲ್ಲೂಕು ಮಟ್ಟದ ಅಧಿಕಾರಿ

| ಕೋರ್ಸ್‌ಗಳ ವಿವರ | ಪ್ರವೇಶ ಪಡೆಯುವ ಶಿಕ್ಷಣ ಸಂಸ್ಥೆ/ಕಾಲೇಜು | ಶುಲ್ಕ ಮಂಜೂರಾತಿ/ ಮರುಪಾವತಿ ಮಾಡಬೇಕಾದ ದರಗಳು |
|---|---|---|
| 1) ಪಿ.ಯು.ಸಿ | ಎ) ಸರ್ಕಾರಿ/ಅನುದಾನಿತ ಕಾಲೇಜು/ ಸಂಸ್ಥೆಗಳು | ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಸರ್ಕಾರ ನಿಗಧಿಪಡಿಸಿದ ಶುಲ್ಕ ಮಾತ್ರ |
| | ಬಿ) ಮಾನ್ಯತೆ ಪಡೆದ ಅನುದಾನ ರಹಿತ ಕಾಲೇಜು/ಸಂಸ್ಥೆಗಳು | |
| 2)ಪದವಿ/ಸ್ನಾತಕೋತ್ತರ ಪದವಿ ಕೋರ್ಸ್‌ಗಳುಕಲಾ/ವಾಣಿಜ್ಯ/ ವಿಜ್ಞಾನ/ಕಾನೂನು ಮತ್ತು ಇನ್ನಿತರೆ ಪದವಿ ಮತ್ತು ಸ್ನಾತಕೋತ್ತರ ಸಾಮಾನ್ಯ ಕೋರ್ಸ್‌ಗಳು, ಎಂ.ಫಿಲ್, ಪಿಹೆಚ್‌ಡಿ | ಎ) ರಾಜ್ಯ/ ಕೇಂದ್ರ ಸರ್ಕಾರದ ವಿಶ್ವವಿದ್ಯಾಲಯಗಳ ಅಧೀನದಲ್ಲಿ ಬರುವ ಸರ್ಕಾರಿ/ಅನುದಾನಿತ ಕಾಲೇಜು/ಸಂಸ್ಥೆಗಳು | ಸರ್ಕಾರ/ಸಂಬಂಧಿಸಿದ ರಾಜ್ಯ/ಕೇಂದ್ರ ಸರ್ಕಾರಿ ವಿಶ್ವವಿದ್ಯಾಲಯಗಳು ನಿಗದಿಪಡಿಸಿದ ಶುಲ್ಕ |
| | ಬಿ) ರಾಜ್ಯ/ಕೇಂದ್ರ ಸರ್ಕಾರದ ವಿಶ್ವವಿದ್ಯಾಲಯಗಳ ಅಧೀನದಲ್ಲಿ ಬರುವ ಮಾನ್ಯತೆ ಪಡೆದ ಅನುದಾನ ರಹಿತ ಕಾಲೇಜು/ಸಂಸ್ಥೆಗಳು | |
| | ಸಿ) ಮಾನ್ಯತೆ ಪಡೆದ ಖಾಸಗಿ/ ಡಿಮ್ಡ್ ವಿಶ್ವವಿದ್ಯಾಲಯಗಳ ಅಧೀನದಲ್ಲಿ ಬರುವ ಕಾಲೇಜು/ ಸಂಸ್ಥೆಗಳು | ಮೇಲ್ಕಂಡ (ಎ) ಮತ್ತು (ಬಿ)ಗೆ ನಿಗಧಿಪಡಿಸಿದ ದರಗಳು ಅಥವಾ ಖಾಸಗಿ/ಡಿಮ್ಡ್ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕಗಳಲ್ಲಿ ಯಾವುದು ಕಡಿಮೆಯೋ ಅದು |
| 3)ವೃತ್ತಿಪರ- ಮೆಡಿಕಲ್ ಎಂ.ಬಿ.ಬಿ.ಎಸ್, ಎಂ.ಎಸ್, ಎಂಡಿ, ಬಿಡಿಎಸ್, ಎಂ.ಡಿ.ಎಸ್, ಪಿಜಿ ಡಿಪ್ಲೊಮಾ ಕೋರ್ಸ್‌ಗಳು/ ಸೂಪರ್ ಸ್ಪೆಷಾಲಿಟಿ ಕೋರ್ಸ್ | ಎ) ಸರ್ಕಾರಿ ಕಾಲೇಜು/ ಸಂಸ್ಥೆಗಳು | ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಸರ್ಕಾರ ನಿಗದಿ ಪಡಿಸಿದ ಶುಲ್ಕ |
| | ಬಿ) ಅನುದಾನಿತ/ ಮಾನ್ಯತೆ ಪಡೆದ ಅನುದಾನ ರಹಿತ ಕಾಲೇಜು/ಸಂಸ್ಥೆಗಳು | 1) ಸಿ.ಇ.ಟಿ/ಪಿ.ಜಿ.ಸಿ.ಇ.ಟಿ ಮೂಲಕ ಸರ್ಕಾರಿ ಕೋಟಾದಡಿ ಆಯ್ಕೆಯಾದ ಅಭ್ಯರ್ಥಿಗಳಗೆ- ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಸರ್ಕಾರ ನಿಗದಿಪಡಿಸಿದ ಶುಲ್ಕ.<br>2)ಕಾಮೆಡ್-ಕೆ/ಕೆ.ಆರ್.ಎಲ್.ಎಂ.ಪಿ.ಸಿ.ಎ/ ಮೂಲಕ ಆಯ್ಕೆಯಾದ ಅಭ್ಯರ್ಥಿಗಳಗೆ – ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಆ ಸೀಟುಗಳಗೆ ಸರ್ಕಾರ ನಿಗದಿಪಡಿಸಿದ ಶುಲ್ಕ. |

--4)

ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

| | | | |
|---|---|---|---|
| | | ಸಿ) ಮಾನ್ಯತೆ ಖಾಸಗಿ/ಡಿಮ್ಡ್ ಯನಿವರ್ಸಿಟಿ ಕಾಲೇಜುಗಳು | ಸಿಇಟಿ/ಪಿಜಿಸಿಇಟಿ ಮುಖಾಂತರ ಅಥವಾ ಅವರೆ ನೇರವಾಗಿ ಆಯ್ಕೆಗೊಂಡಿದ್ದಲ್ಲಿ- ಸರ್ಕಾರ ಕಾಮೆಡ್-ಕೆ ಸೀಟಿಗೆ ನಿಗದಿಪಡಿಸಿದ ಶುಲ್ಕದ ಶೇ.50% ರಷ್ಟು ಮಾತ್ರ ನೀಡುವುದು (ಡೊನೇಷನ್ ಸೀಟು ಪಡೆದವರು ಶುಲ್ಕ ಮರುಪಾವತಿಗೆ ಅರ್ಹರಲ್ಲ) |
| 3. | ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳು:- ಅಗ್ರಿಕಲ್ಚರ್, ಹಾರ್ಟಿಕಲ್ಚರ್, ವೆಟರ್ನರಿ, ಫಾರೆಸ್ಟ್, ಮೀನುಗಾರಿಕೆ, ರೇಷ್ಮೆ <u>(ಸಂಬಂಧಿಸಿದ ಇಲಾಖೆಗಳು/ವಿಶ್ವವಿದ್ಯಾಲಯಗಳು ಮಂಜೂರಾತಿ/ಮರು ಪಾವತಿ ಪ್ರಾಧಿಕಾರಿಗಳು)</u> ***** | ಎ) ಸರ್ಕಾರ/ ಸಂಬಂಧಿಸಿದ ಸರ್ಕಾರದ ವಿಶ್ವವಿದ್ಯಾಲಯಗಳು ನಡೆಸುತ್ತಿರುವ ಕಾಲೇಜುಗಳು | ಸರ್ಕಾರ/ಸಂಬಂಧಿಸಿದ ಸರ್ಕಾರದ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕದಲ್ಲಿ ಶೇ 50 ರಷ್ಟು |
| | | ಬಿ) ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನ ರಹಿತ ಕಾಲೇಜು/ಸಂಸ್ಥೆಗಳು | ಸರ್ಕಾರ/ಸಂಬಂಧಿಸಿದ ಸರ್ಕಾರದ ವಿಶ್ವವಿದ್ಯಾಲಯಗಳು ಸರ್ಕಾರಿ ಸೀಟುಗಳಿಗೆ ನಿಗಧಿಪಡಿಸಿದ ಶುಲ್ಕದಲ್ಲಿ ಶೇ 50 ರಷ್ಟು |
| | | ಸಿ) ಮಾನ್ಯತೆ ಪಡೆದ ಖಾಸಗಿ/ ಡೀಮ್ಡ್ ವಿಶ್ವವಿದ್ಯಾಲಯಗಳು ಮತ್ತು ಅವುಗಳ ಅಧೀನದಲ್ಲಿನ ಕಾಲೇಜು/ಸಂಸ್ಥೆಗಳು/ | ಸರ್ಕಾರ/ಸಂಬಂಧಿಸಿದ ಸರ್ಕಾರದ ವಿಶ್ವವಿದ್ಯಾಲಯಗಳು ಸರ್ಕಾರಿ ಸೀಟುಗಳಿಗೆ ನಿಗಧಿಪಡಿಸಿದ ಶುಲ್ಕದ ಶೇ 50% ರಷ್ಟು: ಅಥವಾ ಖಾಸಗಿ/ಡಿಮ್ಡ್ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕಗಳಲ್ಲಿನ ಶೇ 50% ರಷ್ಟು ಇವುಗಳಲ್ಲಿ ಯಾವುದು ಕಡಿಮೆಯೋ ಅದು. |
| 4. | ಇನ್ನಿತರೆ ಎಲ್ಲಾ ಪದವಿ ಮತ್ತು ಸ್ನಾತಕೋತ್ತರ ಪದವಿ, ಡಿಪ್ಲೋಮಾ, ಪಿ.ಜಿ.ಡಿಪ್ಲೋಮಾ, ಪಿ.ಯು.ಸಿ ಇನ್ನಿತರೆ ಕೋರ್ಸ್‌ಗಳು <u>(ಸಂಬಂಧಿಸಿದ ಇಲಾಖೆಗಳು/ ವಿಶ್ವವಿದ್ಯಾಲಯಗಳು ಮಂಜೂರಾತಿ/ಮರು ಪಾವತಿ ಪ್ರಾಧಿಕಾರಿಗಳು)</u> ***** | ಎ) ಸರ್ಕಾರ/ಸರ್ಕಾರದ ವಿಶ್ವವಿದ್ಯಾಲಯಗಳು ನಡೆಸುತ್ತಿರುವ ಕಾಲೇಜುಗಳು | ಸರ್ಕಾರ/ಸಂಬಂಧಿಸಿದ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕದಲ್ಲಿ ಶೇ 50 ರಷ್ಟು. |
| | | ಬಿ) ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನ ರಹಿತ ಕಾಲೇಜು/ಸಂಸ್ಥೆಗಳು | ಸರ್ಕಾರ/ಸಂಬಂಧಿಸಿದ ಸರ್ಕಾರದ ವಿಶ್ವವಿದ್ಯಾಲಯಗಳು ಸರ್ಕಾರಿ ಸೀಟುಗಳಿಗೆ ನಿಗಧಿಪಡಿಸಿದ ಶುಲ್ಕದಲ್ಲಿ ಶೇ 50 ರಷ್ಟು. |
| | | ಸಿ) ಮಾನ್ಯತೆ ಪಡೆದ ಖಾಸಗಿ/ ಡೀಮ್ಡ್ ವಿಶ್ವವಿದ್ಯಾಲಯಗಳು ಮತ್ತು ಅವುಗಳ ಅಧೀನದಲ್ಲಿನ ಕಾಲೇಜು/ಸಂಸ್ಥೆಗಳು/ | ಸರ್ಕಾರ/ಸಂಬಂಧಿಸಿದ ಸರ್ಕಾರದ ವಿಶ್ವವಿದ್ಯಾಲಯಗಳು ಸರ್ಕಾರಿ ಸೀಟುಗಳಿಗೆ ನಿಗಧಿಪಡಿಸಿದ ಶುಲ್ಕದ ಶೇ 50% ರಷ್ಟು: ಅಥವಾ ಖಾಸಗಿ/ಡಿಮ್ಡ್ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕಗಳಲ್ಲಿನ ಶೇ 50% ರಷ್ಟು ಇವುಗಳಲ್ಲಿ ಯಾವುದು ಕಡಿಮೆಯೋ ಅದು. |

***** ಸಂಬಂಧಪಟ್ಟ ಇಲಾಖೆಗಳು ಎಸ್‌ಸಿ.ಎಸ್‌ಪಿ/ಟಿ.ಎಸ್.ಪಿ ಯೋಜನೆಯಡಿ ಆಯವ್ಯಯ ಸಮಯದಲ್ಲಿ ಅನುದಾನ ಒದಗಿಸಿಕೊಂಡು ಶುಲ್ಕ ಮರುಪಾವತಿ ಮಾಡುವುದು.

--10)

ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

ಮಂಜೂರಾತಿ/ಮರುಪಾವತಿ ಪ್ರಾಧಿಕಾರಿಗಳು ಮಂಜೂರಾತಿ ನೀಡುವಾಗ ಸರ್ಕಾರಿ ಕೋಟಾ ಸೀಟುಗಳು ಎಷ್ಟಿವೆ ಎಂಬುದನ್ನು ಖಾತ್ರಿಪಡಿಸಿಕೊಂಡು ಮೇಲ್ಕಂಡಂತೆ ಮಂಜೂರಾತಿ ನೀಡುವುದು.

<u>ಶಿಕ್ಷಣ ಸಂಸ್ಥೆಗಳು ಪ್ರವೇಶದ ಸಮಯದಲ್ಲಿ ತೆಗೆದುಕೊಳ್ಳಬೇಕಾದ ಕ್ರಮ</u>

1) ಎ) ಕುಟುಂಬದ ವಾರ್ಷಿಕ ಆದಾಯ <u>ರೂ.2.50</u> ಲಕ್ಷರೊಳಗಿನ ಪ್ರಕರಣಗಳಲ್ಲಿ – ಪ.ಜಾತಿ ಮತ್ತು ಪ.ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಸಿ.ಇ.ಟಿ/ಪಿ.ಜಿ.ಸಿ.ಇ.ಟಿ ಮುಖಾಂತರ ಪ್ರವೇಶ ಪಡೆಯುವ ಸಮಯದಲ್ಲಿ ಮೂಲ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದಲ್ಲಿ ಅಂತಹವರಿಂದ ಶುಲ್ಕವನ್ನು ಪಡೆಯದೆ ಪ್ರವೇಶಾತಿಯನ್ನು ನೀಡುವುದು. ವಿದ್ಯಾರ್ಥಿಗಳು ಶುಲ್ಕ ಮಂಜೂರಾತಿಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸತಕ್ಕದ್ದು. ನಂತರ ಆ ಶುಲ್ಕವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಮರು ಪಾವತಿಸಲಾಗುವುದು.

ಬಿ) ಆದರೆ ಪ್ರವೇಶ ಪಡೆಯುವ ಸಮಯದಲ್ಲಿ ಮೂಲ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದೇ ಇದ್ದಲ್ಲಿ ಅಂತಹವರಿಂದ ಶುಲ್ಕವನ್ನು ಪಡೆದು ಪ್ರವೇಶಾತಿಯನ್ನು ನೀಡುವುದು. ನಂತರ ಅಂತಹ ಪ್ರಕರಣಗಳನ್ನು ನಿಯಮಾನುಸಾರ ಪರಿಶೀಲಿಸಿ ಅರ್ಹರಿಗೆ ಶುಲ್ಕವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಮರು ಪಾವತಿಸಲಾಗುವುದು.

ಸಿ) ಇದೇ ರೀತಿಯಲ್ಲಿ ಇತರ ಕಾಲೇಜು/ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಶುಲ್ಕವನ್ನು ಪಡೆಯದೆ ಪ್ರವೇಶ ನೀಡತಕ್ಕದ್ದು. ಮತ್ತು ಮರು ಪಾವತಿಗೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳುವುದು.

ಡಿ) ಆದಾಯ ಪ್ರಮಾಣ ಪತ್ರ ಕೋರ್ಸ್ ಅವಧಿಗೆ ಮಾನ್ಯತೆ ಹೊಂದಿರುತ್ತದೆ. (ಕೋರ್ಸ್ ಅವಧಿಯಲ್ಲಿ ಪ್ರತಿ ವರ್ಷವು ಆದಾಯ ಪ್ರಮಾಣ ಪತ್ರ ನವೀಕರಿಸಬೇಕಾಗಿರುವುದಿಲ್ಲ.) ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆ ಮತ್ತು ಸಂಸ್ಥೆಗಳಲ್ಲಿ ಉದ್ಯೋಗ ಮಾಡುತ್ತಿರುವ ನೌಕರರು/ಅಧಿಕಾರಿಗಳು ಕಡ್ಡಾಯವಾಗಿ ವೇತನ ಪ್ರಮಾಣ ಪತ್ರ/ ಆದಾಯ ತೆರಿಗೆ ಪಾವತಿ ರಿಟರ್ನ್ಸ್‌ನ್ನು ಸಲ್ಲಿಸತಕ್ಕದ್ದು. (ಹಾಗಿದ್ದಲ್ಲಿ ತಹಶೀಲ್ದಾರ್‌ರವರಿಂದ ಆದಾಯ ಪ್ರಮಾಣ ಪತ್ರ ಅವಶ್ಯಕತೆ ಇರುವುದಿಲ್ಲ.)

2) ಎ). ಕುಟುಂಬದ ವಾರ್ಷಿಕ ಆದಾಯ <u>ರೂ.2.50 ಲಕ್ಷದಿಂದ ರೂ.10.00 ಲಕ್ಷ</u> ದೊಳಗಿನ ಪ್ರಕರಣಗಳಲ್ಲಿ ಪ.ಜಾತಿ ಮತ್ತು ಪ.ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಸಿ.ಇ.ಟಿ/ಪಿ.ಜಿ.ಸಿ.ಇ.ಟಿ ಮುಖಾಂತರ ಪ್ರವೇಶ ಪಡೆಯುವ ಸಮಯದಲ್ಲಿ ಮೂಲ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದಲ್ಲಿ ಅಂತಹವರಿಂದ ಶೇ.50ರಷ್ಟು ಶುಲ್ಕವನ್ನು ಪಡೆದು ಪ್ರವೇಶಾತಿಯನ್ನು ನೀಡುವುದು. ನಂತರ ಉಳಿದ ಶೇ.50ರಷ್ಟು ಶುಲ್ಕವನ್ನು ಸಂಬಂಧಿಸಿದ ತಾಂತ್ರಿಕ ಶಿಕ್ಷಣ/ವೈದ್ಯಕೀಯ ಶಿಕ್ಷಣ ಮತ್ತು ಇತರೆ ಇಲಾಖೆಗಳಿಂದ, ವಿಶ್ವವಿದ್ಯಾಲಯದ ಕಾಲೇಜು/ಶಿಕ್ಷಣ ಸಂಸ್ಥೆಗಳಿಗೆ ಮರು ಪಾವತಿಸಲಾಗುವುದು.

ಬಿ) ಆದರೆ ಪ್ರವೇಶ ಪಡೆಯುವ ಸಮಯದಲ್ಲಿ ಮೂಲ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಹಾಜರುಪಡಿಸದೇ ಇದ್ದಲ್ಲಿ ಅಂತಹವರಿಂದ ಶುಲ್ಕವನ್ನು ಪಡೆದು ಪ್ರವೇಶಾತಿಯನ್ನು ನೀಡುವುದು. ನಂತರ ಅಂತಹ ಪ್ರಕರಣಗಳನ್ನು ಪರಿಶೀಲಿಸಿ ನಿಯಮಾನುಸಾರ ಶುಲ್ಕವನ್ನು ಸಂಬಂಧಪಟ್ಟ ಇಲಾಖೆಯವರು ಮರು ಪಾವತಿಸುವುದು.

ಸಿ) ಕಾಮೆಡ್-ಕೆ/ ಕೆ.ಆರ್.ಎಲ್.ಎಂ.ಪಿ.ಸಿ.ಎ/ಖಾಸಗಿ/ಡೀಮ್ಡ್ ಯುನಿವರ್ಸಿಟಿ ಮೂಲಕ ಪ.ಜಾತಿ ಮತ್ತು ಪ.ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಕಾಲೇಜು/ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಸಮಯದಲ್ಲಿ ಶೇ.50ರಷ್ಟು ಶುಲ್ಕವನ್ನು ವಿದ್ಯಾರ್ಥಿಗಳಿಂದ ಪಡೆದು ಪ್ರವೇಶ ನೀಡುವುದು. ನಂತರ ಶುಲ್ಕದಲ್ಲಿನ ಶೇ: 50 ಪ್ರತಿಶತ ಮೊತ್ತವನ್ನು ಸಂಬಂಧಿಸಿದ ತಾಂತ್ರಿಕ ಶಿಕ್ಷಣ/ವೈದ್ಯಕೀಯ ಶಿಕ್ಷಣ ಮತ್ತು ಇತರೆ ಇಲಾಖೆಗಳಿಂದ, ವಿಶ್ವವಿದ್ಯಾಲಯದ ಕಾಲೇಜು/ಶಿಕ್ಷಣ ಸಂಸ್ಥೆಗಳಿಗೆ ಮರು ಪಾವತಿಸಲಾಗುವುದು.

ಡಿ) ಇತರ ಕಾಲೇಜು/ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಶೇ.50ರಷ್ಟು ಶುಲ್ಕವನ್ನು ಪಡೆದು ಪ್ರವೇಶ ನೀಡುವುದು. ನಂತರ ಶುಲ್ಕದಲ್ಲಿನ ಶೇ: 50 ಪ್ರತಿಶತ ಮೊತ್ತವನ್ನು ಸಂಬಂಧಿಸಿದ ತಾಂತ್ರಿಕ ಶಿಕ್ಷಣ/ವೈದ್ಯಕೀಯ ಶಿಕ್ಷಣ ಮತ್ತು ಇತರೆ ಇಲಾಖೆಗಳಿಂದ, ವಿಶ್ವವಿದ್ಯಾಲಯದ ಕಾಲೇಜು/ಶಿಕ್ಷಣ ಸಂಸ್ಥೆಗಳಿಗೆ ಮರು ಪಾವತಿಸಲಾಗುವುದು.

—11)

ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

ಇ) ಆದಾಯ ಪ್ರಮಾಣ ಪತ್ರ ಕೋರ್ಸ್ ಅವಧಿಗೆ ಮಾನ್ಯತೆ ಹೊಂದಿರುತ್ತದೆ. (ಕೋರ್ಸ್ ಅವಧಿಯಲ್ಲಿ ಪ್ರತಿ ವರ್ಷವು ಆದಾಯ ಪ್ರಮಾಣ ಪತ್ರ ನವೀಕರಿಸಬೇಕಾಗಿರುವುದಿಲ್ಲ.) ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆ ಮತ್ತು ಸಂಸ್ಥೆಗಳಲ್ಲಿ ಉದ್ಯೋಗ ಮಾಡುತ್ತಿರುವ ನೌಕರರು/ಅಧಿಕಾರಿಗಳು ಕಡ್ಡಾಯವಾಗಿ ವೇತನ ಪ್ರಮಾಣ ಪತ್ರ ಹಾಗೂ ಆದಾಯ ತೆರಿಗೆ ಪಾವತಿ ರಿಟರ್ನ್ಸ್‌ನ್ನು ಸಲ್ಲಿಸತಕ್ಕದ್ದು. (ಹಾಗಿದ್ದಲ್ಲಿ ತಹಶೀಲ್ದಾರ್‌ರವರಿಂದ ಆದಾಯ ಪ್ರಮಾಣ ಪತ್ರ ಅವಶ್ಯಕತೆ ಇರುವುದಿಲ್ಲ.)

V. ಮಂಜೂರಾದ ಮೊತ್ತವನ್ನು ಜಮಾ ಮಾಡುವ ವಿಧಾನ

1) ತಾಲ್ಲೂಕು ಸಮಾಜ ಕಲ್ಯಾಣ ಸಹಾಯಕ ನಿರ್ದೇಶಕರು ಗ್ರೇಡ್-1 & 2 ಇವರು ವಿದ್ಯಾರ್ಥಿಗಳಿಂದ ಶುಲ್ಕವನ್ನು ಪಡೆಯದೇ ಇರುವ ಪ್ರಕರಣಗಳಲ್ಲಿ ಈ ಆದೇಶದಂತೆ ಶುಲ್ಕ ಮಂಜೂರಾತಿ ನೀಡಿ ಮಂಜೂರಾದ ಶುಲ್ಕವನ್ನು ಕಾಲೇಜು/ಶಿಕ್ಷಣ ಸಂಸ್ಥೆಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಜಮೆ ಮಾಡತಕ್ಕದ್ದು. ಒಂದು ವೇಳೆ ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿಗಳಿಂದ ಶುಲ್ಕ ಪಡೆದಿದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ಮಂಜೂರಾದ ಶುಲ್ಕವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಜಮೆ ಮಾಡತಕ್ಕದ್ದು.

2) ಅದೇ ರೀತಿ ಇತರ ಇಲಾಖೆಗಳ ಮಂಜೂರಾತಿ ಪ್ರಾಧಿಕಾರಿಗಳು ವಿದ್ಯಾರ್ಥಿಗಳಿಂದ ಶುಲ್ಕವನ್ನು ಕಾಲೇಜು/ಶಿಕ್ಷಣ ಸಂಸ್ಥೆಗಳು ಪ್ರವೇಶ ಸಮಯದಲ್ಲಿ ಪಡೆದಿದ್ದಲ್ಲಿ ಈ ಆದೇಶದಂತೆ ಶುಲ್ಕ ಮಂಜೂರಾತಿ ನೀಡಿ ಮಂಜೂರಾದ ಶುಲ್ಕವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಜಮೆ ಮಾಡತಕ್ಕದ್ದು.

3) ಕಾಲೇಜು/ಶಿಕ್ಷಣ ಸಂಸ್ಥೆಗಳಿಗೆ ಮತ್ತು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ಜಮಾ ಆಗಿರುವ ವಿವರಗಳನ್ನು ಬ್ಯಾಂಕ್‌ಗಳಿಂದ ಪಡೆದು ದಾಖಲಾತಿಗಳನ್ನು ಸಂಬಂಧಿಸಿದ ಶುಲ್ಕ ಮಂಜೂರಾತಿ ಪ್ರಾಧಿಕಾರಿಗಳು ತಮ್ಮ ಕಚೇರಿಗಳಲ್ಲಿ ನಿರ್ವಹಿಸುವುದು. ಈ ವಿವರಗಳನ್ನು ಆಡಿಟ್ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

4) ಶುಲ್ಕ ಮಂಜೂರಾತಿ/ಮರು ಪಾವತಿ ವಿಧಾನವನ್ನು ಅಂದರೆ ಅರ್ಜಿಗಳ ಆಹ್ವಾನ, ಮಂಜೂರಾತಿ, ಮತ್ತು ಸಂದಾಯ, ಇತ್ಯಾದಿ ಪ್ರಕ್ರಿಯೆಗಳನ್ನು ಸಂಪೂರ್ಣವಾಗಿ ಆನ್‌ಲೈನ್ ಮೂಲಕ ಗಣಕೀಕರಣಗೊಳಿಸತಕ್ಕದ್ದು.

VI. ಶುಲ್ಕ ಮರು ಪಾವತಿ ಬಗ್ಗೆ ಉಸ್ತುವಾರಿ ಸಮಿತಿ.

ರಾಜ್ಯ ಮತ್ತು ಕೇಂದ್ರ ಸರ್ಕಾರದ ಆದೇಶಗಳಂತೆ ವಿವಿಧ ಇಲಾಖೆಗಳು ನಿಗದಿಪಡಿಸಿರುವ ಶುಲ್ಕಗಳ ಬಗ್ಗೆ ಮತ್ತು ಶುಲ್ಕ ಮರು ಪಾವತಿ ಅನುಷ್ಠಾನದ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಈ ಕೆಳಕಂಡಂತೆ ಉಸ್ತುವಾರಿ ಸಮಿತಿಯನ್ನು ರಚಿಸಲಾಗಿದೆ.

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ – ಅಧ್ಯಕ್ಷರು
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ – ಸದಸ್ಯರು
3. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ – ಸದಸ್ಯರು
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ – ಸದಸ್ಯರು
5. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ – ಸದಸ್ಯರು
6. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ – ಸದಸ್ಯರು
7. ಜಂಟಿ/ಉಪ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ – ಸದಸ್ಯರು
8. ಜಂಟಿ ನಿರ್ದೇಶಕರು (ಶಿಕ್ಷಣ) ಸಮಾಜ ಕಲ್ಯಾಣ ಇಲಾಖೆ – ಸದಸ್ಯ ಕಾರ್ಯದರ್ಶಿ

VII. ಇತರ ಷರತ್ತುಗಳು

1. ಕುಟುಂಬದ ವಾರ್ಷಿಕ ವರಮಾನ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ವಯ ಪರಿಷ್ಕರಣೆಗೆ ಒಳಪಟ್ಟಿರುತ್ತದೆ.
2. ಶುಲ್ಕ ಮಂಜೂರಾತಿ/ಮರುಪಾವತಿ ಅನುಷ್ಠಾನದ ಬಗ್ಗೆ ಅಗತ್ಯವಿರುವ ಅರ್ಜಿ ನಮೂನೆ ಇತ್ಯಾದಿಗಳನ್ನು ಸಂಬಂಧಿಸಿದ ಇಲಾಖೆಗಳು ನಿರ್ಧರಿಸುವುದು.

---12)

ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

3. ವಿದ್ಯಾರ್ಥಿಗಳು ಮತ್ತು ಶಿಕ್ಷಣ ಸಂಸ್ಥೆಗಳು ತಪ್ಪು ಮಾಹಿತಿ ನೀಡಿದ್ದಲ್ಲಿ ಮತ್ತು ಈ ಆದೇಶ ಉಲ್ಲಂಘಿಸಿದಲ್ಲಿ ಅಂತಹವರ ವಿರುದ್ಧ ಸಂಬಂಧಿಸಿದ ಇಲಾಖೆ ಮುಖ್ಯಸ್ಥರುಗಳು ಕ್ರಮ ಕೈಗೊಳ್ಳುವುದು.
   ಎ) ಭಾರತೀಯ ದಂಡ ಸಂಹಿತೆಯ ಕಲಂ 177 & 181 ರ ಪ್ರಕಾರ ಶಿಕ್ಷೆಗೆ ಗುರಿಪಡಿಸಲಾಗುತ್ತದೆ.
   ಬಿ) ಮೇಲ್ಕಂಡಂತೆ ಕ್ರಮ ಜರುಗಿಸುವುದರ ಜೊತೆಗೆ ಒಟ್ಟು ಪಾವತಿಸಿದ ಶುಲ್ಕವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ಸಂಬಂಧಿಸಿದವರಿಂದ ವಸೂಲಿ ಮಾಡಲಾಗುವುದು.
4. ಮಂಜೂರಾತಿ ಅಧಿಕಾರಿಗಳು ಈ ಆದೇಶವನ್ನು ಉಲ್ಲಂಘಿಸಿ ಶುಲ್ಕ ಮರು ಪಾವತಿ ಮಾಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವುದಲ್ಲದೇ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.
5. ಸರ್ಕಾರದ ಈ ಆದೇಶವು 2015-16ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುತ್ತದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 74 ಐಎಂಎಂ 2015, ದಿನಾಂಕ: 23.07.2015 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 769 ವೆಚ್ಚ-3, 2015 ದಿನಾಂಕ:14.09.2015 ಹಾಗೂ ದಿನಾಂಕ: 14.12.2015 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

31/12/2015
(ಗಿರಿಜಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

<u>ಪ್ರತಿಯನ್ನು:</u>

1. ಮಹಾಲೇಖಪಾಲರು ಕರ್ನಾಟಕ, ಬೆಂಗಳೂರು.
2. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
3. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ.
4. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ.
5. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ.
6. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ಕೃಷಿ ಇಲಾಖೆ
7. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ
8. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ಕಾರ್ಮಿಕ/ಉದ್ಯೋಗ ಮತ್ತು ತರಬೇತಿ ಇಲಾಖೆ.
9. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ಪಶುಸಂಗೋಪನೆ ಇಲಾಖೆ.
10. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ.
11. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ.
12. ಆಯುಕ್ತರು, ಕೃಷಿ ಇಲಾಖೆ
13. ಆಯುಕ್ತರು, ತೋಟಗಾರಿಕೆ ಇಲಾಖೆ.
14. ಆಯುಕ್ತರು, ರೇಷ್ಮೆ ಇಲಾಖೆ.
15. ಆಯುಕ್ತರು, ಪಶುಸಂಗೋಪನಾ ಇಲಾಖೆ/ಮೀನುಗಾರಿಕೆ ಇಲಾಖೆ.
16. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ
17. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ
18. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ.
19. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ.
20. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ
21. ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ/ಯುನಾನಿ

---13)

ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

SRI DHARMASTHALA MANJUNATHESHWARA COLLEGE (AUTONOMOUS)
office pu
UJIRE-574 240
DAKSHINA KANNADA, KARNATAKA STATE
(Re-Accredited by NAAC at 'A'-Grade with CGPA 3.61 out of 4)
Ph: 08256-236221,236101(O) Fax: 236220
e-mail: sdmcollege@rediffmail.com,sdmcollege@sdmcujire.in, Website: www.sdmcujire.in

# FEES CONCESSION FOR THE SC/ST STUDENTS

## Gist of the order

## ISSUED BY THE GOVERNMENT OF KARNATAKA

1. Government order No. SWL/229/BCA/80 Dated: 06.12.1982
2. Proposal of commissioner, social welfare department no Sa Ka Ni/ED/3/CR 02/2015-16 Dated 15.04.2015

100% fee concession will be given to the students whose parents are having annual income less than 2.5 lakhs and 50% concession will be given to the students whose parents are having annual income from 2.5 lakhs to 10.00 lakhs

Signed by the Additional secretary of government, social welfare Dept.

Herewith the list of students who have availed this scholarship is furnished.

PRINCIPAL
S.D.M.COLLEGE
UJIRE - 574240, D.K